## ನಿಮ್ಮೊಡನೆ

# ಜನಪ್ರಿಯತೆಯ ನೆಲೆಗಟ್ಟಿನ ಸಿನಿಮಾಪ್ರೀತಿ ಸರ್ಕಾರಕ್ಕೆ ಬೇಕಿದೆ ಸ್ಪಷ್ಟ ಸಾಂಸ್ಕೃತಿಕ ನೀತಿ

**ಸಿನಿಮಾಕ್ಕೆ ಗಣನೀಯ ಕೊಡುಗೆ ನೀಡಿದವರನ್ನು ಗೌರವಿಸುವುದು ಹಾಗೂ ಸ್ಮರಿಸುವುದು ಒಳ್ಳೆಯ ನಡವಳಿಕೆ. ಈ ಉತ್ಸಾಹ ಕ್ರಿಯಾಶೀಲವಾಗಿ ಉದ್ಯಮವನ್ನು ಬೆಳೆಸುವ ನಿಟ್ಟಿನಲ್ಲೂ ವ್ಯಕ್ತಗೊಳ್ಳದೆ ಹೋದಲ್ಲಿ, ಸರ್ಕಾರದ ಸಿನಿಮಾ ಪ್ರೀತಿಯನ್ನು ಅನುಮಾನದಿಂದ ನೋಡಬೇಕಾಗುತ್ತದೆ.**

ಕನ್ನಡ ಚಿತ್ರರಂಗಕ್ಕಿದು ರಮ್ಯ ಚೈತ್ರ ಕಾಲ. ಕಳೆದ ವಾರ ಬೆಂಗಳೂರಿನ ವರ್ತುಲ ರಸ್ತೆಯೊಂದಕ್ಕೆ ‘ಪುನೀತ್ ರಾಜ್‌ಕುಮಾರ್ ರಸ್ತೆ’ ಎಂದು ನಾಮಕರಣ ಮಾಡಲಾಯಿತು. ರೇಸ್‌ಕೋರ್ಸ್ ರಸ್ತೆಯ ಹೆಸರನ್ನು ಅಂಬರೀಶ್ ರಸ್ತೆ ಎಂದು ಬದಲಿಸಲು ನಿರ್ಧರಿಸಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಈ ರಸ್ತೆ ನಾಮಕರಣಗಳ ಜೊತೆಗೆ ನನೆಗುದಿಗೆ ಬಿದ್ದಿದ್ದ ‘ವಿಷ್ಣುವರ್ಧನ್ ಸ್ಮಾರಕ’ ಮೈಸೂರಿನ ಹಾಲಾಳು ಬಳಿ ರೂಪುಗೊಂಡಿದ್ದು, ಇತ್ತೀಚೆಗಷ್ಟೇ ಲೋಕಾರ್ಪಣೆಗೊಂಡಿದೆ. ಪುನೀತ್ ರಾಜ್‌ಕುಮಾರ್ ಅವರ ಸಮಾಧಿ ಸ್ಥಳವನ್ನೂ ಸ್ಮಾರಕವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರ ತನ್ನ ಬದ್ಧತೆ ವ್ಯಕ್ತಪಡಿಸಿದೆ. ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವವನ್ನು ಮಾರ್ಚ್‌ನಲ್ಲಿ ನಡೆಸುವುದಕ್ಕೂ ಸರ್ಕಾರ ಹಸುರುನಿಶಾನೆ ತೋರಿದೆ.

‘ರಾಜ್‌ಕುಮಾರ್, ಅಂಬರೀಶ್, ವಿಷ್ಣುವರ್ಧನ್, ಶಂಕರ್‌ನಾಗ್, ಅಪ್ಪು – ಇವರೆಲ್ಲ ನಮ್ಮನ್ನು ರಂಜಿಸಲು ಬಂದಿದ್ದರು, ಅವರು ನಮ್ಮೆಲ್ಲರಿಗೂ ಪ್ರೀತಿ ಬಿಟ್ಟುಹೋಗಿದ್ದಾರೆ’ ಎಂದು ಬಸವರಾಜ ಬೊಮ್ಮಾಯಿ ಭಾವುಕರಾಗಿ ಹೇಳಿದ್ದಾರೆ. ಅವರ ಮಾತು ನಿಜ. ಈ ಕಲಾವಿದರು ದಶಕಗಳ ಕಾಲ ಕನ್ನಡ ಜನತೆಯನ್ನು ರಂಜಿಸಿದ್ದಾರೆ. ಆದರೆ, ಇವರ ಕೊಡುಗೆ ರಂಜನೆಗಷ್ಟೇ ಸೀಮಿತವಾಗಿಲ್ಲ. ಕನ್ನಡ ಸಂಸ್ಕೃತಿಯನ್ನು ಸಿನಿಮಾ ಮಾಧ್ಯಮದ ಮೂಲಕ ಕಟ್ಟುವ ಕೆಲಸವನ್ನು ಕಲಾವಿದರು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ವಿಶೇಷವಾಗಿ, ರಾಜ್‌ಕುಮಾರ್ ಅವರು ನಿರ್ವಹಿಸಿದ ಪಾತ್ರಗಳು ಹಾಗೂ ಅವರ ವ್ಯಕ್ತಿತ್ವ ಕನ್ನಡ ಜನಮಾನಸದ ಮೇಲೆ ಬೀರಿದ ಪ್ರಭಾವ ದೊಡ್ಡದು. ಸಿನಿಮಾಗಳ ಕುರಿತ ನಮ್ಮ ಮಾತು ಬಹುತೇಕ ಸಂದರ್ಭಗಳಲ್ಲಿ ಮನರಂಜನೆಗಷ್ಟೇ ಸೀಮಿತವಾಗಿ, ಮನೋವಿಕಾಸದ ಸಾಧ್ಯತೆಗಳು ಹಿಂದೆ ಸರಿದುಬಿಡುತ್ತವೆ. ಮುಖ್ಯಮಂತ್ರಿಗಳ ಮಾತುಗಳೂ ರಂಜನೆಯತ್ತಲೇ ಬೆಟ್ಟು ಮಾಡುತ್ತಿವೆ. ಸಿನಿಮಾ ನಟರ ಸ್ಮಾರಕ–ನಾಮಕರಣ ಕಾರ್ಯಕ್ರಮಗಳ ಬಗ್ಗೆ ರಾಜ್ಯಸರ್ಕಾರ ತೋರುತ್ತಿರುವ ಉತ್ಸಾಹದ ಹಿಂದೆಯೂ ಇಂತಹುದೇ ಜನಪ್ರಿಯ ಸಾಧ್ಯತೆಯಿದೆ.

ಸಿನಿಮಾ ಕಲೆಯ ಬಗ್ಗೆ ಸರ್ಕಾರಕ್ಕೆ ನಿಜವಾದ ಪ್ರೀತಿ, ಕಳಕಳಿ ಇದ್ದಲ್ಲಿ, ಚಿತ್ರೋದ್ಯಮದ ಬೆಳವಣಿಗೆಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ನೆರವಾಗಬೇಕು ಹಾಗೂ ಕನ್ನಡ ಸಂಸ್ಕೃತಿಯನ್ನು ಸಿನಿಮಾ ಮಾಧ್ಯಮದ ಮೂಲಕ ಎತ್ತಿಹಿಡಿಯುವ ಪ್ರಯತ್ನಗಳನ್ನು ಉತ್ತೇಜಿಸಬೇಕು. ಸೃಜನಶೀಲ ಪ್ರಯತ್ನಗಳನ್ನು ಉತ್ತೇಜಿಸುವ ಉದ್ದೇಶದಿಂದ ನೀಡುವ ರಾಜ್ಯಪ್ರಶಸ್ತಿಗಳನ್ನು ನಿಯಮಿತವಾಗಿ ನೀಡುವುದು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಕಳೆದ ನಾಲ್ಕೈದು ವರ್ಷಗಳಿಂದ ಪ್ರಶಸ್ತಿ ಆಯ್ಕೆ ಪ್ರಕ್ರಿಯೆಯೇ ನನೆಗುದಿಗೆ ಬಿದ್ದಿದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡುವ ‘ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ’ಕ್ಕೆ ನಿರ್ದಿಷ್ಟ ಕ್ಯಾಲೆಂಡರ್ ಗೊತ್ತುಪಡಿಸುವುದೂ ಇದುವರೆಗೆ ಸಾಧ್ಯವಾಗಿಲ್ಲ. ಕನ್ನಡ ಚಿತ್ರರಂಗದ ಶೈಕ್ಷಣಿಕ ಹಾಗೂ ತಾತ್ವಿಕ ತಳಹದಿಯನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡುವ ಉದ್ದೇಶದಿಂದ ರೂಪುಗೊಂಡ ‘ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಳಿ’ ಇತ್ತೀಚಿನ ವರ್ಷಗಳಲ್ಲಿ ಚಿತ್ರೋತ್ಸವಗಳ ಆಚೆಗೆ ತನ್ನ ಅಸ್ತಿತ್ವವನ್ನು ಪ್ರಕಟಪಡಿಸಿದ್ದೇ ಇಲ್ಲ. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದ ಚಿತ್ರ ನಿರ್ಮಾತೃಗಳು ತಮ್ಮ ಸಿನಿಮಾಗಳನ್ನು ತೆರೆಕಾಣಿಸುವ ಅವಕಾಶಗಳು ಕರ್ನಾಟಕದಲ್ಲಿಲ್ಲ. ಅಂಥ ಅವಕಾಶಗಳನ್ನು ರೂಪಿಸಿಕೊಡುವ ಮೂಲಕ ಸಿನಿಮಾ ಸಂಸ್ಕೃತಿ ಬಲಪಡಿಸಬಹುದೆಂದು ಸರ್ಕಾರಕ್ಕೆ ಮನವರಿಕೆಯಾಗುವುದಿಲ್ಲ. ಏಕೆಂದರೆ, ತಾರಾವರ್ಚಸ್ಸಿನ ಕಲಾವಿದರು ಹಾಗೂ ವ್ಯಾಪಾರಿ ಸಿನಿಮಾಗಳ ಜೊತೆಗೆ ಗುರ್ತಿಸಿಕೊಂಡಾಗ ಸರ್ಕಾರಕ್ಕೆ ದೊರೆಯುವ ಪ್ರಚಾರ, ಪ್ರಯೋಗಶೀಲ ಸಿನಿಮಾಗಳು ಹಾಗೂ ಅವುಗಳ ನಿರ್ಮಾತೃಗಳನ್ನು ಉತ್ತೇಜಿಸುವುದರಿಂದ ದೊರೆಯುವುದಿಲ್ಲ.

ಚಿತ್ರರಂಗವನ್ನು ಬೇರುಮಟ್ಟದಲ್ಲಿ ಬಲಪಡಿಸುವ ನಿಟ್ಟಿನಲ್ಲಿ ಕ್ರಿಯಾಶೀಲವಾಗುವ ಬದಲು, ರಸ್ತೆಗಳನ್ನು ಸಿನಿಮಾನಟರ ಹೆಸರಿನಿಂದ ಕರೆಯುವುದು ಹಾಗೂ ಸ್ಮಾರಕಗಳನ್ನು ನಿರ್ಮಿಸುವುದರಿಂದ ಚಿತ್ರರಂಗದ ಬೆಳವಣಿಗೆಗೆ ಯಾವ ಉಪಯೋಗವೂ ಇಲ್ಲ. ಸಿನಿಮಾಕ್ಕೆ ಗಣನೀಯ ಕೊಡುಗೆ ನೀಡಿದವರನ್ನು ಗೌರವಿಸುವುದು ಹಾಗೂ ಸ್ಮರಿಸುವುದು ಒಳ್ಳೆಯ ನಡವಳಿಕೆ ಎನ್ನುವುದರಲ್ಲಿ ಅನುಮಾನವೇನೂ ಇಲ್ಲ. ಈ ಉತ್ಸಾಹ ಕ್ರಿಯಾಶೀಲವಾಗಿ ಉದ್ಯಮವನ್ನು ಬೆಳೆಸುವ ನಿಟ್ಟಿನಲ್ಲೂ ವ್ಯಕ್ತಗೊಳ್ಳದೆ ಹೋದಲ್ಲಿ, ಸರ್ಕಾರದ ಸಿನಿಮಾಪ್ರೀತಿಯನ್ನು ಅನುಮಾನದಿಂದ ನೋಡಬೇಕಾಗುತ್ತದೆ.

ರಸ್ತೆಗಳನ್ನು ಸಿನಿಮಾನಟರ ಹೆಸರುಗಳಿಂದ ಗುರ್ತಿಸುವ ಹಾಗೂ ಸ್ಮಾರಕ ನಿರ್ಮಿಸುವ ಸರ್ಕಾರ, ಇತರ ಕ್ಷೇತ್ರಗಳ ಸಾಧಕರ ಬಗ್ಗೆಯೂ ಯೋಚಿಸಬೇಕಾಗಿದೆ. ವಿಶ್ವಶ್ರೇಷ್ಠ ವಿಜ್ಞಾನಿಗಳು, ಜ್ಞಾನವೇತ್ತರು, ವಿವಿಧ ಕಲೆಗಳ ಸಿದ್ಧಿಯಲ್ಲಿ ಔನ್ನತ್ಯವನ್ನು ಮುಟ್ಟಿದವರು ಕನ್ನಡನಾಡಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರ ಕೊಡುಗೆಯಿಂದಲೂ ನಾಡಿನ ಸಂಸ್ಕೃತಿ ಪುಷ್ಟಗೊಂಡಿದೆ ಎಂದು ಸರ್ಕಾರಕ್ಕೆ ತಿಳಿಯುವುದು ಯಾವಾಗ?

**■ ರಘುನಾಥ ಚ.ಹ.**



ಈಶ್ವರ್